ಆದರೆ, ಆ ರಾತ್ರಿ ವಾಯರ್‌ಲೆಸ್‌ನ ಮುಖಾಂತರ ಮಾತುಗಳು ಆರಂಭವಾದವು.

'ಹಲೋ, ಗ್ರೌಂಡ್ ಜೀರೋ. ಮಂಜಿನ ಹಕ್ಕಿ ಮಾತಾಡುತ್ತಿರುವುದು. ಓವರ್.'

'ಹಲೋ, ಮಂಜಿನ ಹಕ್ಕಿ ನಾಳೆ ನಸುಕಿನಲ್ಲಿ ಶತ್ರು ಸೆಕ್ಟರ್‌ನ ಮೇಲೆ ದಾಳಿ ಮಾಡಬೇಕಿದೆ, ಓವರ್.'

'ಎಸ್ ಸರ್, ನಾನು ನನ್ನ ಸೈನಿಕರ ತುಕಡಿಯನ್ನು ಸಿದ್ಧಪಡಿಸುತ್ತನೆ. ನಾವು ಸಿದ್ಧವಾಗಿದ್ದೇವೆ, ಓವ್ವರ್.'

'ಮಂಜಿನ ಹಕ್ಕಿ, ಸ್ವಲ್ಪ ಕಾಯಬೇಕು. ನಸುಕಿನ ನಾಲ್ಕು ಗಂಟೆಗೆ ದಾಳಿ ಪ್ರಾರಂಭವಾಗಬೇಕು. ಓವರ್ ಅಂಡ್ ಸ್ವಾಪ್.'

**ಯುದ್ಧದಿಂದ ಈಚೆಯ ಆಚೆಯ ಜನರಿಗೆ ಏನೇನು ದೊರೆಯಲಿದೆ? ಚೀಡ, ದೇವದಾರು ವೃಕ್ಷಗಳಿಗೆ ಮತ್ತೆ ಒಂದಾದರೂ ಹೊಸ ಚಿಗುರೆಲೆ ಹುಟ್ಟಿಕೊಳ್ಳಲಿದೆಯೇ? ಫಸಲು ಹೆಚ್ಚಾಗಿ ಬೆಳೆಯುತ್ತದೆಯೇ? ಇದರಿಂದ ಸಿಂಧೂ, ಝೇಲಂ ಹಾಗೂ ಸಟ್ಲೆಜ್ ನದಿಗಳ ನೀರು ಮಾವಿನರಸವಾಗಿ ಮಾರ್ಪಡುತ್ತದೆಯೇ?**

ಅತ್ಯಂತ ನಿರ್ಣಾಯಕವಾದ ಸಮಯವಿದೆಂದು ಕರ್ನಲ್ ಸರ್ಫರಾಜ್ ಹುಸೇನರಿಗೆ ಅರ್ಥವಾಯಿತು. ಇಂದು ಮಹತ್ವಾದ ಜವಾಬ್ದಾರಿಯೊಂದು ಅವರ ಹೆಗಲೇರಿದೆ. ಅವರು ಕೂಡಲೇ ಬಂಕರ್‌ನಲ್ಲಿಯ ಎಲ್ಲರಿಗೂ ಸುದ್ದಿ ಕಳಿಸಿದರು. ಒಬ್ಬ ಮೆಸೆಂಜರ್‌ನನ್ನು ಸರಹದ್ದಿನ ಚೌಕಿಯತ್ತಲೂ ಓಡಿಸಿದರು. ನಂತರ ಸಿಗರೇಟು ಹೊತ್ತಿಸಿಕೊಂಡು ತಮ್ಮ ಕ್ಯಾಂಪ್‌ನತ್ತ ಹೊರಟರು, ಒಂದಿಷ್ಟು ಹೊತ್ತಾದರೂ ಬೆನ್ನು ತಾಕಿಸಬೇಕೆಂದು. ಅಲ್ಲದೆ ಇಂಥ ವಿಚಿತ್ರ ಸನ್ನಿವೇಶದಲ್ಲಿ ನಿದ್ರೆಯೂ ಬರುವುದಿಲ್ಲವೆಂದು ಅವರಿಗೂ ಗೊತ್ತಿತ್ತು.

ಹಿಮಾಲಯದ ಪೂರ್ವದಿಂದ ಪಶ್ಚಿಮದತ್ತ ಕಣಿವೆಗಳಿಂದ ಹಾಯುವ ಗಾಳಿಗಳು ಯಾವುದೇ ಅಡೆತಡೆಗಳಿಲ್ಲದೇ ಘಾಟ್‌ಗಳಲ್ಲಿ ಸುಳಿದಾಡುತ್ತಿದ್ದವು. ಚೀಡ, ದೇವದಾರ ಹಾಗೂ ಭೋಜಪತ್ರದ ರೆಂಬೆಕೊಂಬೆಗಳಿಂದ ಇಳಿಇಳಿದು ಬರುತ್ತಿದ್ದ ಮಿಂಚುಹುಳುಗಳು ಪಾಕಿಸ್ತಾನಿ ಕಾಶ್ಮೀರದ ಪುಣ್ಯಭೂಮಿಯಲ್ಲಿ ಬೆಳಕಿನ ಅಲೆಗಳನ್ನು ಹೊಮ್ಮಿಸುತ್ತಿದ್ದವು. ಸರ್ಫರಾಜ್‌ನ ಮಿಲ್ಟ್ರಿ ಬೂಟುಗಳೆದುರಿಗೂ ಹಲವಾರು ಮಿಂಚುಹುಳುಗಳು ಹರಿದಾಡುತ್ತಿದ್ದವು. ಅವರು ಕೂಡಲೇ ಕಾಲುಗಳನ್ನು ಹಿಂತೆಗೆದುಕೊಂಡರು. ಈ ಬೆಳಕಿನ ಬಿಂದುಗಳನ್ನು ಬೂಟಿನ ಮೇಲೆ ಇರಿಸಿಕೊಳ್ಳುವುದು ಯೋಗ್ಯವಾದೀತೇ? ಮೊಳಕಾಲೂರಿ ಕುಳಿತು ಬೆಳಕಿನ ಹನಿಗಳನ್ನು ಬೊಗಸೆಯಲ್ಲಿ ತುಂಬಿಕೊಳ್ಳಬೇಕು, ಮತ್ತೆ... ಹೂಗಳಂತೆ ಅವನ್ನು ನಾಲ್ದೆಸೆಗಳಲ್ಲಿಯೂ ತೂರಿಬಿಡಬೇಕು ಎಂದೆನಿಸಿತು.

ಮೇಲಕ್ಕೆ ತಲೆಯೆತ್ತಿ ನೋಡಿದಾಗ ಮುಗಿಲಿನಲ್ಲಿಯ ಚಂದ್ರ ನಕ್ಕಂತೆ ಭಾಸವಾಯಿತು. ಅವರು ಕಣ್ಣು ಮಿಟುಕಿಸದೇ ಅವನನ್ನು ನೋಡತೊಡಗಿದರು. ಹಿಂದೊಮ್ಮೆ ಅಕಾಡೆಮಿಯಲ್ಲಿದ್ದಾಗ... ಅಕಾಡೆಮಿಯು ಎಲ್ಲ ವಿದ್ಯಾರ್ಥಿಗಳನ್ನು ಜೊತೆಗೂಡಿಸಿಕೊಂಡು ಮಸೂರಿಯಿಂದಾಚೆಯ ಕೈಂಪ್ಟಿ ವಾಟರ್ ಫಾಲ್‌ನ ಪರಿಸರದಲ್ಲಿ ಕ್ಯಾಂಪ್ ಹೂಡಿತ್ತು. ಆ ರಾತ್ರಿ ಇಬ್ಬರೂ ಮಿತ್ರರು ನಿಶ್ಚಿಂತೆಯಿಂದ ಸುತ್ತಾಡಲೆಂದು ಕ್ಯಾಂಪ್‌ನಿಂದ ಹೊರಟು ಬಂದಿದ್ದರು. ಮಾತಾಡುತ್ತಾ ನಾಲ್ಕು ನಾಲ್ಕು ಹೆಜ್ಜೆ